KAKB620017282016

Presented on : 13-12-2016
Registered on : 13-12-2016
Decided on : 17-04-2026
Duration : 9 years, 4 months, 4 days

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.**

**ಉಪಸ್ಥಿತರುಃ**
**ಶ್ರೀ ಕಾಶಿನಾಥ ವಿ. ಉಪ್ಪಾರ್**
ಬಿ.ಎಸ್.ಸಿ. ಎಲ್ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ.

**ಸಿ.ಸಿ.ನಂ.523/2016**

**ದಿನಾಂಕಃ 17ನೇ ಏಪ್ರೀಲ- 2026 ರಂದು**

**ಫಿರ್ಯಾದಿದಾರರುಃ**

ಕರ್ನಾಟಕ ರಾಜ್ಯ ಯಡ್ರಾಮಿ ಪೊಲೀಸರಿಂದ)

**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ದ -**

**ಆರೋಪಿತರುಃ** ಮಲ್ಲಪ್ಪಾ ತಂದೆ ನಿಂಗಪ್ಪಾ ತಳವಾರ
ವ : 36 ವರ್ಷ, ಉಃ ಚಾಲಕ,
ಸಾಃ ಕಾಚಾಪೂರ, ತಾಃ ಜೇವರ್ಗಿ,

**(ಆರೋಪಿತರ ಪರ ಶ್ರೀ ಬಿ.ಬಿ., ವಕೀಲರು)**

| | | | |
|---|---|---|---|
| 1. | ಪ್ರಕರಣ ನಡೆದ ದಿನಾಂಕ | : | 23-06-2016 |
| 2. | ಪ್ರಕರಣ ದಾಖಲಾದ ದಿನಾಂಕ | : | 23-06-2016 |
| 3. | ಆರೋಪಿತರನ್ನು ಬಂಧಿಸಿದ ದಿನಾಂಕ | : | -- |
| 4. | ಫಿರ್ಯಾದಿದಾರರ ಹೆಸರು | : | ಪಾರ್ವತಿ |

5. ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕ : 01-03-2021

6. ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕ: 14-01-2026

7. ಅಪಾದನೆಗಳು : ಭಾ.ದಂ.ಸಂ.ಕಲಂ 279, 304(ಎ), ಸಹ ಕಲಂ 187 ಐ ಎಂ ವಿ ಆ್ಯಕ್ಟ ರಡಿಯಲ್ಲಿ

8. ನ್ಯಾಯಾಧೀಶರ ತೀರ್ಮಾನ : ಅಂತಿಮ ಆದೇಶದಂತೆ

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

**<u>ತೀರ್ಪು</u>**

ಯಡ್ರಾಮಿ ಪೊಲೀಸ್ ಠಾಣೆ, ಯಡ್ರಾಮಿ ಇವರು ಆರೋಪಿತನ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 279, 304(ಎ) ಸಹ ಕಲಂ 187 ಐ ಎಂ ವಿ ಆ್ಯಕ್ಟ ರಡಿಯಲ್ಲಿ ಶಿಕ್ಷಾರ್ಹ ಅಪಾದನೆಗಳಿಗಾಗಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2. **<u>ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆಃ-</u>**

ದಿನಾಂಕ 23-06-2016 ರಂದು ರಾತ್ರಿ 8-45 ಗಂಟೆಗೆ ಯಡ್ರಾಮಿ ಪೊಲೀಸ್ ಠಾಣಾ ವ್ಯಾಪ್ತಿಯ ಸೈದಾಪೂರನ ಕ್ರಾಸ ಹತ್ತಿರದ ಹೂಗಾರ ಹೊಲದ ಹತ್ತಿರ ಚಿಗರಳ್ಳಿ ಕ್ರಾಸ-ಯಡ್ರಾಮಿ ರಸ್ತೆಯ ಮೇಲೆ, ಅಪಾದಿತನಾದ ನೀನು ಚಿಗರಳ್ಳಿ ಕ್ರಾಸ ಕಡೆಯಿಂದ ಯಡ್ರಾಮಿ ಕಡೆಗೆ ಟಂಟಂ ನಂಬರ ಕೆಎ-32-ಸಿ-3654 ನೇದ್ದನ್ನು ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಅತಿವೇಗ

ಮತ್ತು ಅಲಕ್ಷತನದಿಂದ ಚಲಾಯಿಸಿ ಮಾದೆಗೌಡ ಇತನು ನಡೆಸಿಕೊಂಡು ಬರುತ್ತಿದ್ದ ಟ್ರ್ಯಾಕ್ಟರ ನಂಬರ ಕೆಎ-32-ಟಿ-7972, ಚೆಸ್ಸಿ ನಂಬರ ಡಬ್ಲೂಎಕ್ಸಿಸಿಎಫ್ 40606099778, ಇಂಜಿನ ನಂ.431024 ಎಸ್.ಟಿ.ಎಫ್ 11259 ಮತ್ತು ಟ್ರಾಲಿ ನಂ. ಕೆಎ-32-ಟಿ-7639, ಚೆಸ್ಸಿ ನಂ. ಎಸ್ವಿಜೆಎ 11006 ನೇದ್ದನ್ನು ಅತಿವೇಗವಾಗಿ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ಒಬ್ಬರಿಗೊಬ್ಬರು ಸೈಡ ಕೊಡದೆ ಒಮ್ಮೇಲೆ ಕಟ್ ಹೊಡೆದುದರಿಂದ ಟ್ರಾಕ್ಟರ ಟ್ರಾಲಿ ಟಂಟಂ ದಲ್ಲಿ ಕುಳಿತು ಹೋಗುತ್ತಿದ್ದ ಚಾಸಾ-1, 7 ಮತ್ತು ತಾಯಮ್ಮ, ದೊಡ್ಡಮ್ಮ ಇವರ ಪೈಕಿ ತಾಯಮ್ಮ ಮತ್ತು ದೊಡ್ಡಮ್ಮಳಿಗೆ ಬಡಿದುದರಿಂದ ಅವರಿಬ್ಬರೂ ರಸ್ತೆಯ ಮೇಲೆ ಬಿದ್ದು ಭಾರಿ ಗಾಯಗೊಂಡು ದೊಡ್ಡಮ್ಮ ಸ್ಥಳದಲ್ಲಿಯೇ ಮೃತಪಟ್ಟಿದ್ದು, ತಾಯಮ್ಮಳಿಗೆ ಹೆಚ್ಚಿನ ಉಪಚಾರಕ್ಕಾಗಿ ಕಲಬುರಗಿಗೆ ತೆಗೆದುಕೊಂಡು ಹೋಗುವಾಗ ಅವಳು ಕಲಬುರಗಿಯ ಸರಕಾರಿ ಆಸ್ಪತ್ರೆ ಆವರಣದಲ್ಲಿ ಆ ದಿನ ರಾತ್ರಿ 11-45 ಗಂಟೆಗೆ ಮೃತಪಟ್ಟಿದ್ದು, ಸದರಿ ಅಪಘಾತಪಡಿಸಿದ ನಂತರ ಸದರಿ ಅಪಘಾತದ ಸುದ್ದಿಯನ್ನು ಸಂಬಂಧಪಟ್ಟ ಪೋಲಿಸರಿಗೆ ತಿಳಿಸದೆ ಆಸ್ಪತ್ರೆಯಲ್ಲಿ ಟಂಟಂನ್ನು ಬಿಟ್ಟು ಓಡಿ ಹೋಗಿರುತ್ತಾರೆಂದು ಆರೋಪಿತನ ವಿರುದ್ದ ಫಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಯಡ್ರಾಮಿ ಪೊಲೀಸರು ತಮ್ಮ ಠಾಣಾ ಗುನ್ನಾ ನಂ.92/2016 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತನ ವಿರುದ್ದ ಭಾರತೀಯ ದಂಡ ಸಂಹಿತೆ

ಕಲಂ. 279, 304(ಎ) ಸಹ ಕಲಂ 187 ಐ ಎಂ ವಿ ಆ್ಯಕ್ಟ ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತನ ಹಾಜರಾತಿಯನ್ನು ಪಡೆಯಲಾಯಿತು. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತನಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ 279, 304(ಎ) ಸಹ ಕಲಂ 187 ಐ ಎಂ ವಿ ಆ್ಯಕ್ಟ ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ ಆರೋಪಿತನಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತನ ವಿರುದ್ದ ಆಪಾದನೆಗಳನ್ನು ಸಾಬೀತು ಪಡಿಸುವ ಸಲುವಾಗಿ ಒಟ್ಟು 12 ಜನ ಸಾಕ್ಷಿದಾರರು ಪ್ರಾಸಾ-1 ರಿಂದ 12 ಎಂದು ಸಾಕ್ಷಿ ವಿಚಾರಣೆ ಮಾಡಿಸಿದ್ದು, ನಿಶಾನೆ ಪಿ-1 ರಿಂದ 24 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷಿದಾರರ ವಿಚಾರಣೆಯಾದ ನಂತರ ದ.ಪ್ರ.ಸಂ.ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿತರು ತಮ್ಮ ಪರವಾಗಿ ಸಾಕ್ಷಿ ವಿಚಾರಣೆಗೆ ಮುಂದಾಗಿರುವುದಿಲ್ಲ.

6. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯ ಸಮ್ಮುಖದಲ್ಲಿರುವ, ಈ ಮೊಕ್ಕದ್ದಮ್ಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕುಲಂಕುಷವಾಗಿ ಪರಿಶೀಲಿಸಲಾಯಿತು.

7. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

**ಅಂಶಗಳು**

1. ದಿನಾಂಕ 23-06-2016 ರಂದು ರಾತ್ರಿ 8-45 ಗಂಟೆಗೆ ಯಡ್ರಾಮಿ ಪೊಲೀಸ್ ಠಾಣಾ ವ್ಯಾಪ್ತಿಯ ಸೈದಾಪೂರನ ಕ್ರಾಸ ಹತ್ತಿರದ ಹೂಗಾರ ಹೊಲದ ಹತ್ತಿರ ಚಿಗರಳ್ಳಿ ಕ್ರಾಸ-ಯಡ್ರಾಮಿ ರಸ್ತೆಯ ಮೇಲೆ, ಅಪಾದಿತನಾದ ನೀನು ಚಿಗರಳ್ಳಿ ಕ್ರಾಸ ಕಡೆಯಿಂದ ಯಡ್ರಾಮಿ ಕಡೆಗೆ ಟಂಟಂ ನಂಬರ ಕೆಎ-32-ಸಿ-3654 ನೇದ್ದನ್ನು ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಅತಿವೇಗ ಮತ್ತು ಅಲಕ್ಷತನದಿಂದ ಚಲಾಯಿಸಿ ಆ ಮೂಲಕ ಭಾ.ದಂ.ಸಂ. ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಿರಿ?

2. ಆರೋಪಿತನಾದ ನೀನು ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲೆ ಹೇಳಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಲಾಯಿಸಿ ಎದುರಿನಿಂದ ಮಾದೆಗೌಡ ಇತನು ನಡೆಸಿಕೊಂಡು ಬರುತ್ತಿದ್ದ ಟ್ರ್ಯಾಕ್ಟರ ನಂಬರ ಕೆಎ-32-ಟಿ-7972, ಚೆಸ್ಸಿ ನಂಬರ ಡಬ್ಲೂಎಕ್ಸಿಸಿಎಫ್ 40606099778, ಇಂಜಿನ ನಂ.431024 ಎಸ್.ಟಿ.ಎಫ್ 11259 ಮತ್ತು ಟ್ರಾಲಿ ನಂ. ಕೆಎ-32-ಟಿ-7639 ಚೆಸ್ಸಿ ನಂ. ಎಸ್‌ವಿಜಿಎ 11006 ನೇದ್ದನ್ನು ಅತಿವೇಗವಾಗಿ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ಒಬ್ಬರಿಗೊಬ್ಬರು ಸೈಡ ಕೊಡದೆ ಒಮ್ಮೇಲೆ ಕಟ್ ಹೊಡೆದುದರಿಂದ ಟ್ರಾಕ್ಟರ ಟ್ರಾಲಿ ಟಂಟಂ ದಲ್ಲಿ ಕುಳಿತು ಹೋಗುತ್ತಿದ್ದ ಚಾಸಾ-1, 7 ಮತ್ತು ತಾಯಮ್ಮ, ದೊಡ್ಡಮ್ಮ ಇವರ ಪೈಕಿ ತಾಯಮ್ಮ ಮತ್ತು ದೊಡ್ಡಮ್ಮಳಿಗೆ ಬಡಿದುದರಿಂದ ಅವರಿಬ್ಬರೂ ರಸ್ತೆಯ ಮೇಲೆ ಬಿದ್ದು ಭಾರಿ ಗಾಯಗೊಂಡು

ದೊಡ್ಡಮ್ಮ ಸ್ಥಳದಲ್ಲಿಯೇ ಮೃತಪಟ್ಟಿದ್ದು, ತಾಯಮ್ಮಳಿಗೆ ಹೆಚ್ಚಿನ ಉಪಚಾರಕ್ಕಾಗಿ ಕಲಬುರಗಿಗೆ ತೆಗೆದುಕೊಂಡು ಹೋಗುವಾಗ ಅವಳು ಕಲಬುರಗಿಯ ಸರಕಾರಿ ಆಸ್ಪತ್ರೆ ಆವರಣದಲ್ಲಿ ಆ ದಿನ ರಾತ್ರಿ 11-45 ಗಂಟೆಗೆ ಮೃತಪಟ್ಟಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಿರಿ?

3. ಆರೋಪಿತನಾದ ನೀನು ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸದರಿ ಅಪಘಾತಪಡಿಸಿದ ನಂತರ ಸದರಿ ಅಪಘಾತದ ಸುದ್ದಿಯನ್ನು ಸಂಬಂಧಪಟ್ಟ ಪೋಲಿಸರಿಗೆ ತಿಳಿಸದೆ ಆಸ್ಪತ್ರೆಯಲ್ಲಿ ಟಂಟಂನ್ನು ಬಿಟ್ಟು ಓಡಿ ಹೋಗಿದ್ದು, ಆ ಮೂಲಕ ಭಾ.ಮೊ.ವಾ. ಕಾಯ್ದೆ ಯ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಿರಿ?

4. ಯಾವ ಆದೇಶ ಅಥವಾ ಶಿಕ್ಷೆ?

8. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶ ನಂ.1 ರಿಂದ 3 : ಸಕರಾತ್ಮಕವಾಗಿ.

ಅಂಶ ನಂ.4 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

## ಕಾ ರ ಣ ಗ ಳು

9. **ಅಂಶ ನಂ.1 ರಿಂದ 3:-** ಸದರಿ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಈ ಪ್ರಕರಣದಲ್ಲಿ ಆರೋಪಿತನ ವಿರುದ್ಧ ಮಾಡಲಾದ ಆಪಾದನೆಯನ್ನು ರುಜುವಾತುಪಡಿಸುವ ಸಂಪೂರ್ಣ ಹೊಣೆಗಾರಿಕೆ ಅಭೀಯೋಜನೆಯವರ ಮೇಲೆ ಇದ್ದು, ಅದಕ್ಕಾಗಿ ಅಭೀಯೋಜನೆಯವರು ಸಾಕಷ್ಟು ನಂಬಲು ಅರ್ಹವಾದ ಸಾಕ್ಷಿ ಪುರಾವೆಗಳನ್ನು ಪೂರೈಸುವ ಹೊಣೆಗಾರಿಕೆ ಹಾಗೂ

ಆರೋಪಿತನ ಮೇಲೆ ಇರುವ ಆರೋಪವನ್ನು ನಿಸ್ಸಂಶಯವಾಗಿ ರುಜುವಾತುಪಡಿಸುವ ಹೊಣೆಗಾರಿಕೆಯು ಅಭೀಯೋಜನೆಯವರ ಮೇಲೆ ಇರುತ್ತದೆ.

10. ಅಭೀಯೋಜನೆಯ ಪ್ರಕರಣವೆನೆಂದರೆ, ದಿನಾಂಕ 23-06-2016 ರಂದು ರಾತ್ರಿ 8-45 ಗಂಟೆಗೆ ಯಡ್ರಾಮಿ ಪೊಲೀಸ್ ಠಾಣಾ ವ್ಯಾಪ್ತಿಯ ಸೈದಾಪೂರನ ಕ್ರಾಸ ಹತ್ತಿರದ ಹೂಗಾರ ಹೊಲದ ಹತ್ತಿರ ಚಿಗರಳ್ಳಿ ಕ್ರಾಸ-ಯಡ್ರಾಮಿ ರಸ್ತೆಯ ಮೇಲೆ, ಅಪಾದಿತನಾದ ನೀನು ಚಿಗರಳ್ಳಿ ಕ್ರಾಸ ಕಡೆಯಿಂದ ಯಡ್ರಾಮಿ ಕಡೆಗೆ ಟಂಟಂ ನಂಬರ ಕೆಎ-32-ಸಿ-3654 ನೇದ್ದನ್ನು ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಅತಿವೇಗ ಮತ್ತು ಅಲಕ್ಷತನದಿಂದ ಚಲಾಯಿಸಿ ಮಾದೆಗೌಡ ಇತನು ನಡೆಸಿಕೊಂಡು ಬರುತ್ತಿದ್ದ ಟ್ರ್ಯಾಕ್ಟರ ನಂಬರ ಕೆಎ-32-ಟಿ-7972, ಚೆಸ್ಸಿ ನಂಬರ ಡಬ್ಲೂಎಕ್ಸಿಸಿಎಫ್ 40606099778, ಇಂಜಿನ ನಂ.431024 ಎಸ್.ಟಿ.ಎಫ್ 11259 ಮತ್ತು ಟ್ರಾಲಿ ನಂ. ಕೆಎ-32-ಟಿ-7639 ಚೆಸ್ಸಿ ನಂ. ಎಸ್‌ವಿಜೆಎ 11006 ನೇದ್ದನ್ನು ಅತಿವೇಗವಾಗಿ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ಒಬ್ಬರಿಗೊಬ್ಬರು ಸೈಡ ಕೊಡದೆ ಒಮ್ಮೇಲೆ ಕಟ್ ಹೊಡೆದುದರಿಂದ ಟ್ರಾಕ್ಟರ ಟ್ರಾಲಿ ಟಂಟಂ ದಲ್ಲಿ ಕುಳಿತು ಹೋಗುತ್ತಿದ್ದ ಚಾಸಾ-1, 7 ಮತ್ತು ತಾಯಮ್ಮ, ದೊಡ್ಡಮ್ಮ ಇವರ ಪೈಕಿ ತಾಯಮ್ಮ ಮತ್ತು ದೊಡ್ಡಮ್ಮಳಿಗೆ ಬಡಿದುದರಿಂದ ಅವರಿಬ್ಬರೂ ರಸ್ತೆಯ ಮೇಲೆ ಬಿದ್ದು ಭಾರಿ ಗಾಯಗೊಂಡು ದೊಡ್ಡಮ್ಮ ಸ್ಥಳದಲ್ಲಿಯೇ ಮೃತಪಟ್ಟಿದ್ದು, ತಾಯಮ್ಮಳಿಗೆ ಹೆಚ್ಚಿನ ಉಪಚಾರಕ್ಕಾಗಿ ಕಲಬುರಗಿಗೆ ತೆಗೆದುಕೊಂಡು ಹೋಗುವಾಗ ಅವಳು ಕಲಬುರಗಿಯ ಸರಕಾರಿ ಆಸ್ಪತ್ರೆ ಆವರಣದಲ್ಲಿ ಆ ದಿನ ರಾತ್ರಿ 11-45 ಗಂಟೆಗೆ ಮೃತಪಟ್ಟಿದ್ದು, ಸದರಿ ಅಪಘಾತಪಡಿಸಿದ ನಂತರ ಸದರಿ

ಅಪಘಾತದ ಸುದ್ದಿಯನ್ನು ಸಂಬಂಧಪಟ್ಟ ಪೋಲಿಸರಿಗೆ ತಿಳಿಸದೆ ಆಸ್ಪತ್ರೆಯಲ್ಲಿ ಟಂಟಂನ್ನು ಬಿಟ್ಟು ಓಡಿ ಹೋಗಿರುತ್ತಾರೆಂದು ಆದ್ದರಿಂದ ಪೊಲೀಸರು ಆರೋಪಿತನ ವಿರುದ್ದ ಈ ಪ್ರಕರಣವನ್ನು ದಾಖಲಿಸಿರುತ್ತಾರೆ.

11. ಈ ಪ್ರಕರಣದಲ್ಲಿ ಚಾಸಾ-1 ದೂರುದಾರರು, ಚಾಸಾ-2 ರಿಂದ 5 ರವರು ಶವ ಮಹಜರ ಪಂಚರು ಮತ್ತು ಗುನ್ನೆ ಸ್ಥಳದ ಪಂಚರು ಚಾಸಾ-5 ಮತ್ತು 6 ರವರು ಜಪ್ತಿ ಪಂಚರು ಚಾಸಾ-7 ರಿಂದ 11 ರವರು ಪ್ರತ್ಯಕ್ಷ ಸಾಕ್ಷಿದಾರರು, ಚಾಸಾ-12 ರವರು ಟ್ರ್ಯಾಕ್ಟರ ಮಾಲೀಕರು, ಚಾಸಾ-13 ಮತ್ತು ಚಾಸಾ-14 ಪೊಸ್ಟ ಮಾರ್ಟಮ ಮಾಡಿದ ವೈದ್ಯರಾಗಿದ್ದು, ಚಾಸಾ-15 ವಾಹನ ನಿರೀಕ್ಷಣೆ ಕೈಗೊಂಡ ಅಧಿಕಾರಿಯಾಗಿದ್ದು , ಚಾಸಾ-16 ರವರು ಟ್ರ್ಯಾಕ್ಟರ ಠಾಣೆಗೆ ಹಾಜರುಪಡಿಸಿದವರು, ಚಾಸಾ-19 ರಿಂದ 22 ತನಿಖಾಧಿಕಾರಿಯಾಗಿರುತ್ತಾರೆ.

12. ಈ ಪ್ರಕರಣದಲ್ಲಿ ಅಭೀಯೋಜನೆಯವರು ಪಿರ್ಯಾದಿದಾರ/ಸಾಕ್ಷಿದಾರ ಚಾಸಾ-1 ರವರು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪ್ರಾಸಾ-1 ಪಾರ್ವತಿ, ಇವರು ತಮ್ಮ ಸಾಕ್ಷ್ಯದಲ್ಲಿ, ಐದು ವರ್ಷಗಳ ಹಿಂದೆ ತಾನು, ತನ್ನ ಅಕ್ಕ ಮತ್ತು ತನ್ನ ಮಗಳು ಕೂಡಿಕೊಂಡು ಹಂಗರಗಿ ಗ್ರಾಮಕ್ಕೆ ಟಂಟಂ ವಾಹನದಲ್ಲಿ ಹೋಗಿ ಕಾರ್ಯಕ್ರಮ ಮುಗಿಸಿಕೊಂಡು ರಾತ್ರಿ 8-30 ಗಂಟೆಗೆ ಊರಿಗೆ ವಾಪ್ಪಸ್ಸು ಬರುತ್ತಿರುವಾಗ ಸೈದಾಪೂರ ಕ್ರಾಸ ಹತ್ತಿರ ಯಡ್ರಾಮಿ ಕೆಡಯಿಂದ ನಮ್ಮ ಎದುರಿನಿಂದ ಒಂದು ಟ್ರ್ಯಾಕ್ಟರ ಜೋರಾಗಿ ಬಂದು ಟಂಟಂ ವಾಹನಕ್ಕೆ ಡಿಕ್ಕಿಪಡ್ಡಿಸಿತು, ಆದ್ದರಿಂದ ತಾಯಮ್ಮ ಹಾಗೂ ದೊಡ್ಡಮ್ಮನವರಿಗೆ ಗಾಯಗಳಾಗಿದ್ದವು, ಆರೋಪಿತನೆ ಸದರಿ ಟಂಟಂ ನ್ನು ಚಲಾಯಿಸುತ್ತಿದ್ದು , ಟ್ರ್ಯಾಕ್ಟರ ಚಾಲಕ ಮತ್ತು ಟಂಟಂ

ಚಾಲಕ ಸ್ಥಳದಿಂದ ಓಡಿ ಹೋಗಿರುತ್ತಾರೆ. ಸದರಿ ಅಪಘಾತವು ಟ್ರ್ಯಾಕ್ಟರ ಮತ್ತು ಟಂಟಂ ಚಾಲಕನ ತಪ್ಪಿ ನಿಂದ ಆಗಿರುತ್ತದೆ ಎಂದು ಹೇಳುತ್ತಾರೆ. ಮುಂದುವರೆದು ಎರಡು ವಾಹನಗಳು ತುಂಬಾ ವೇಗವಾಗಿ ಚಲಿಸುತ್ತಿದ್ದವು ಎಂದು ಹೇಳುತ್ತಾರೆ. ಚಾಸಾ-1 ರವರು ಆರೋಪಿತನನ್ನು ಮತ್ತು ಟ್ರ್ಯಾಕ್ಟರ ಚಾಲಕನನ್ನು ಗುರುತಿಸಿರುತ್ತಾರೆ ಮತ್ತು ಅಪಘಾತಪಡಿಸಿದ ಟ್ರ್ಯಾಕ್ಟರ ಮತ್ತು ಟಂಟಂ ವಾಹನಗಳ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ ಪರ ವಕೀಲರು ಚಾಸಾ-1 ರವರನ್ನು ಧೀರ್ಘವಾಗಿ ಪಾಟೀ ಸವಲಾು ಮಾಡಿದ್ದು, ಅಪಘಾತದ ಸ್ಥಳದ ರಸ್ತೆ ಕಿರಿದಾಗಿದ್ದು ಅಲ್ಲಿ ವಾಹನಗಳು ನಿಧಾನವಾಗಿ ಚಲಿಸುತ್ತವೆಂದು ತಮ್ಮ ಪಾಟೀ ಸವಾಲಿನಲ್ಲಿ ಒಪ್ಪಿಕೊಳ್ಳುತ್ತಾರೆ. ಸದರಿ ಅಪಘಾತದಲ್ಲಿ ತಾನು ಟಂಟಂ ನ ಹಿಂಬದಿಯಲ್ಲಿ ಕುಳಿತಿದ್ದು, ಟ್ರ್ಯಾಕ್ಟರ ಚಾಲಕನು ತನ್ನ ಟ್ರ್ಯಾಕ್ಟರನ್ನು ಟಂಟಂನ ಬಲಬದಿಗೆ ಡಿಕ್ಕಿಪಡಿಸಿರುತ್ತಾನೆಂದು, ತಮ್ಮ ಪಾಟೀ ಸವಾಲಿನಲ್ಲಿ ಹೇಳಿರುತ್ತಾರೆ. ಮುಂದುವರೆದು ಚಾಸಾ-1 ರವರು ಆರೋಪಿತರನ್ನು ಗುರುತಿಸುವಿಕೆಗೆ ಮತ್ತು ಮೃತ ತಾಯಮ್ಮ ಮೃತರಾದ ಬಗ್ಗೆ ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ಅಪಘಾತದಲ್ಲಿ ಟಂಟಂನಲ್ಲಿ ಕುಳಿತ ತಾಯಮ್ಮ ಮತ್ತು ಶರಣಮ್ಮ ಇವರಿಗೆ ಮಾತ್ರ ಗಾಯುಗಳಾಗಿದ್ದು ಉಳಿದ ಪ್ರಯಾಣೀಕರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲವೆಂದು ತಮ್ಮ ಪಾಟೀ ಸವಾಲಿನಲ್ಲಿ ಹೇಳುತ್ತಾರೆ.

13. ಈ ಪ್ರಕರಣದಲ್ಲಿ ಚಾಸಾ-2 ರಿಂದ 4 ರವರು ಶವ ಮಹಜರ ಪಂಚರಾಗಿದ್ದು ಮತ್ತು ಅಪಘಾತವಾದ ಸ್ಥಳದ ಪಂಚರಾಗಿದ್ದು, ಶವ ಪಂಚನಾಮೆ ಮತ್ತು ಗುನ್ನೆ ಸ್ಥಳದ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ತನಿಖಾಧಿಕಾರಿಗಳು ತಮ್ಮ ಮುಂದೆ ಯಾವುದೇ ಶವ

ಪಂಚನಾಮೆ ಮತ್ತು ಗುನ್ನೆ ಸ್ಥಳದ ಪಂಚನಾಮೆ ಮಾಡಿದ ಬಗ್ಗೆ ಅಭೀಯೋಜನೆಗೆ ಪ್ರತಿಕೂಲ ಸಾಕ್ಷಿಯಾಗಿ ಹೇಳಿರುತ್ತಾರೆ.ಸಹಾಯಕ ಸರ್ಕಾರಿ ಅಭೀಯೋಜಕರ ಪಾಟೀ ಸವಾಲಿನಲ್ಲಿ ಅಭೀಯೋಜನೆಗೆ ಪೂರಕವಾಗುವ ಯಾವುದೇ ಅಂಶಗಳು ದೊರೆತಿರುವುದಿಲ್ಲ.

14. ಈ ಪ್ರಕರಣದಲ್ಲಿ ಚಾಸಾ-5 ಮತ್ತು 6 ರವರು ಅಪಘಾತಕ್ಕೆ ಕಾರಣವಾದಟಂಟಂ ಮತ್ತು ಟ್ರ್ಯಾಕ್ಟರ ಜಪ್ತಿ ಪಂಚರಾಗಿದ್ದು, ಸದರಿಸಾಕ್ಷಿದಾರರು ಅಭೀಯೋಜನೆಗೆ ಪ್ರತಿಕೂಲ ಸಾಕ್ಷಿಯಾಗಿ ತಮ್ಮ ಸಾಕ್ಷಿಯನ್ನು ಹೇಳಿರುತ್ತಾರೆ. ಸದರಿ ಜಪ್ತಿ ಪಂಚನಾಮೆಯನ್ನು ನಿಪಿ-12 ಮತ್ತು ನಿಪಿ-13 ಎಂದು ಗುರುತಿಸಲಾಗಿರುತ್ತದೆ. ಸದರಿ ದಾಖಲೆಗಳ ಪ್ರಕಾರ ದಿನಾಂಕ 24.06.2016 ರಂದು ಸದರಿ ಅಪಘಾತಕ್ಕೆ ಕಾರಣವಾದ ಟ್ರ್ಯಾಕ್ಟರ ಮತ್ತು ಟ್ರಾಲಿಗಳನ್ನು ಯಡ್ರಾಮಿ ಪೊಲೀಸ ಠಾಣೆಯ ಆವರಣದಲ್ಲಿ ತನಿಖಾಧಿಕಾರಿಗಳು ವಶಪಡಿಸಿಕೊವಾಂಡಿರುತ್ತಾರೆ. ಸಹಾಯಕ ಸರ್ಕಾರಿ ಅಭೀಯೋಜಕರ ಪಾಟೀ ಸವಾಲಿನಲ್ಲಿ ಅಭೀಯೋಜನೆಗೆ ಪೂರಕವಾಗುವ ಯಾವುದೇ ಅಂಶಗಳು ದೊರೆತಿರುವುದಿಲ್ಲ.

15. ಈ ಪ್ರಕರಣದಲ್ಲಿ ಚಾಸಾ-7 ಪ್ರಾಸಾ-5 ಸಿದ್ದಮ್ಮ ಇವಳು ತಮ್ಮ ಸಾಕ್ಷಿಯಲ್ಲಿ ಚಾಸಾ-1 ನನ್ನ ತಂಗಿ. ಚಾಸಾ-8, 9 ಮತ್ತು 11 ರವರ ನನಗೆ ಪರಿಚಯ ಇರುತ್ತದೆ. ಚಾಸಾ-11 ನನ್ನ ಮಗ. ಆರೋಪಿಯು ನನಗೆ ಗೊತ್ತು. ಮೃತ ತಾಯಮ್ಮ ನನ್ನ ನೇಗೆಣಿ, ದೊಡ್ಡಮ್ಮ ನನ್ನ ನೇಗೆಣಿಯ ಮಗಳು. ಈಗ ಸುಮಾರು 8 ವರ್ಷಗಳ ಹಿಂದೆ ತಾನು ಮೃತ ತಾಯಮ್ಮ ಮತ್ತು ದೊಡ್ಡಮ್ಮ, ಚಾಸಾ-1 ರವರು ಕೂಡಿಕೊಂಡು ಆರೋಪಿತನು ನಡೆಸುತ್ತಿದ್ದ ಟಂ ಟಂ ನಲ್ಲಿ

ಹಂಗರಗಾ ಬಿ ಗ್ರಾಮಕ್ಕೆ ಹೋಗಿರುತ್ತೇವೆ. ನಂತರ ನಾವು ಕಾರ್ಯಕ್ರಮವನ್ನು ಮುಗಿಸಿಕೊಂಡು ಕಾಚಾಪೂರಕ್ಕೆ ರಾತ್ರಿ 08.40 ಗಂಟೆ ಸುಮಾರಿಗೆ ಆರೋಪಿತನು ನಡೆಸುತ್ತಿರುವ ಟಂಟಂ ನಲ್ಲಿ ಕುಳಿತುಕೊಂಡು ಬರುತ್ತಿದ್ದಾಗ ಆರೋಪಿತನು ಟಂಟಂನ್ನು ಅತಿ ವೇಗವಾಗಿ ನಡೆಸಿಕೊಂಡು ಬಂದು ಸೈದಾಪೂರ ಕ್ರಾಸ ಹತ್ತಿರ ಎದುರಿಗೆ ಬಂದ ಟ್ರಾಕ್ಟರಿನ ಟ್ರೇಲರ ಟಂಟಂಗೆ ಬಡಿದು ದೊಡ್ಡಮ್ಮಗೆ ತಲೆಯ ಭಾಗಕ್ಕೆ ಭಾರಿ ರಕ್ತಗಾಯವಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ನಂತರ ತಾಯಮ್ಮಳಿಗೆ ಎಡಗಾಲಿಗೆ ಮತ್ತು ಎಡಗೈಗೆ ಭಾರಿ ರಕ್ತಗಾಯವಾಗಿ ನಂತರ ಚಿಕಿತ್ಸೆಗಾಗಿ ಯಡ್ರಾಮಿಯ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಯ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿದಾಗ ಮೃತಪಟ್ಟಿರುತ್ತಾರೆ. ಅಪಘಾತ ಪಡಿಸಿದ ಟ್ರಾಕ್ಟರ, ಟಂಟಂ ನ್ನು ಆರೋಪಿತಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ ಚಾಸಾ-7 ರವರನ್ನು ಸಹಾಯಕ ಸರ್ಕಾರಿ ಅಭೀಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪಾಟೀ ಸವಾಲು ಮಾಡಿರುತ್ತಾರೆ. ಸಹಾಯಕ ಸರ್ಕಾರಿ ಅಭೀಯೊಜಕರ ಪಾಟೀ ಸವಾಲಿನಲ್ಲಿ ಅಪಘಾತವಾದದಿನಾಂಕ ಮತ್ತು ಅಪಘಾತಕ್ಕೆ ಕಾರಣವಾದ ಟಂಟಂ ಮತ್ತು ಟ್ರ್ಯಾಕ್ಟರ ಮತ್ತು ಟ್ರಾಲಿಗಳ ನಂಬರಗಳನ್ನು ಒಪ್ಪಿ ಕೊಂಡಿರುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸವಾಲಿನಲಿನಲ್ಲಿ ಚಾಸಾ-7 ರವರು ತಾನು ಟಂಟಂ ನ ಬಲಬಾಗದಲ್ಲಿ ಕುಳಿತಿರುದಾಗಿ ಒಪ್ಪಿ ಕೊಳ್ಳುತ್ತಾರೆ. ಮುಂದುವರೆದು ತನಗೆ ಈ ಅಪಘಾತದಲ್ಲಿ ಯಾವುದೇ ಗಾಯಗಳು ಆಗಿರುವುದಿಲ್ಲವೆಂದು ಒಪ್ಪಿಕೊಳ್ಳುತ್ತಾರೆ. ಮುಖ್ಯವಾಗಿ ಚಾಸಾ-7 ರವರು ಸದರಿ ಅಪಘಾತವು ಅಪಘಾತದಲ್ಲಿ ಟ್ರ್ಯಾಕ್ಟರ ಟಂಟಂಗೆ ಹೊಡೆದಿರುವುದರಿಂದ ಅಪಘಾತವಾಗಿರುತ್ತದೆಎಂದು ಒಪ್ಪಿಕೊಳ್ಳುತ್ತಾರೆ.

16. ಈ ಪ್ರಕರಣದಲ್ಲಿ ಚಾಸಾ-8 ಪ್ರತ್ಯಕ್ಷ ಸಾಕ್ಷಿದಾರರಿದ್ದು ಸದರಿ ಸಾಕ್ಷಿದಾರರು ಮೃತರಾಗಿರುವುದರಿಂದಅವರ ಸಾಕ್ಷಿಯನ್ನು ಕೈಬಿಡಲಾಗಿದೆ. ಚಾಸಾ-9 ರವರು ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು , ಸದರಿ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಯಾಗಿ ತಮ್ಮ ಸಾಕ್ಷಿಯನ್ನು ಹೇಳಿರುತ್ತಾರೆ. ಸಹಾಯಕ ಸರ್ಕಾರಿ ಅಭೀಯೋಜಕರು ಪಾಟೀ ಸವಾಲು ಮಾಡಿದ್ದು, ಸದರಿ ಪಾಟೀ ಸವಾಲಿನಲ್ಲಿ ಆರೋಪಿಗೆ ಸಹಾಯವಾಗುವ ಯಾವುದೇ ಪೂರಕಾಂಶಗಳು ದೊರೆತಿರುವುದಿಲ್ಲ. ಈ ಪ್ರಕರಣದಲ್ಲಿ ಚಾಸಾ-11 ಮತ್ತು 12 ರವರು ಮೃತರಾಗಿರುವುದರಿಂದ ಅವರ ಸಾಕ್ಷಿಗಳನ್ನು ಕೈಬಿಡಲಾಗಿದೆ.

17. ಈ ಪ್ರಕರಣದಲ್ಲಿ ಚಾಸಾ-10 ಪ್ರಾಸಾ-8 ರವರು ತಮ್ಮ ಸಾಕ್ಷಿಯಲ್ಲಿ, ಚಾಸಾ-1 ನನ್ನ ಚಿಕ್ಕಮ್ಮ. ಚಾಸಾ-8 ಮತ್ತು 9 ಗೊತ್ತಿಲ್ಲ, ಚಾಸಾ-11 ನನ್ನ ಚಿಕ್ಕಪ್ಪ, ಚಾಸಾ-12 ನನಗೆ ಗೊತ್ತಿಲ್ಲ. ಆರೋಪಿ ನನಗೆ ಗೊತ್ತು. ಮೃತ ದೊಡ್ಡಮ್ಮ ನನ್ನ ತಂಗಿ. ತಾಯಮ್ಮ ನನ್ನ ಚಿಕ್ಕಮ್ಮ. ದಿನಾಂಕ 26.06.2016 ರಂದು ತಾನು ಕಾಚಪೂರದಲ್ಲಿದ್ದಾಗ ಚಾಸಾ-7 ರವರು ಸೈದಾಪೂರ ಕ್ರಾಸ ಹತ್ತಿರ ಟ್ರಾಕ್ಟರ ಮತ್ತು ಟಂಟಂ ನಡುವೆ ಅಪಘಾತವಾಗಿರುತ್ತದೆ ಎಂದು ತನಗೆ ಫೋನ ಮುಖಾಂತರ ಹೇಳಿರುತ್ತಾರೆ. ಆನಂತರ ತಾನು ಯಡ್ರಾಮಿ ಸರಕಾರಿ ಆಸ್ಪತ್ರೆಗೆ ಹೋದಾಗ ದೊಡ್ಡಮ್ಮಳ ಭಾರಿ ರಕ್ತಗಾಯವಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ನಂತರ ತಾಯಮ್ಮಳಿಗೆ ಎಡಗಾಲಿಗೆ ಮತ್ತು ಎಡಗೈಗೆ ಭಾರಿ ರಕ್ತಗಾಯವಾಗಿ ಮಾಂಸ ಹೊರಗೆ ಬಂದಿರುತ್ತದೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಯ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಿದ್ದಾಗ ಕಲಬುರಗಿ ಸಮೀಪ ಮಾರ್ಗ ಮದ್ಯದಲ್ಲಿ ಮೃತಪಟ್ಟಿರುತ್ತಾರೆ. ಟಂಟಂ ಮತ್ತು ಟ್ರ್ಯಾಕ್ಟರನ ಚಾಲಕರು ಅತಿವೇಗ ಚಲಾಯಿಸಿದ್ದರಿಂದ ಎರಡು ವಾಹನಗಳ ಚಾಲಕರ ತಪ್ಪಿನಿಂದ

ಅಪಘಾತವಾಗಿರುತ್ತದೆ ಎಂದು ತನಗೆ ಚಾಸಾ-7 ರವರು ಹೇಳಿರುತ್ತಾರೆ. ಘಟನೆ ಕುರಿತು ನಾನು ಯಾವುದೆ ಹೇಳಿಕೆ ನೀಡಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಚಾಸಾ-10 ರವರು ಈ ಪ್ರಕರಣದಲ್ಲಿ ಅಪಘಾತದ ಬಗ್ಗೆ ಕೇಳಿ ತಿಳಿದುಕೊಂಡ ಸಾಕ್ಷಿದಾರರಾಗಿರುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಆರೋಪಿಗೆಸಹಾಯವಾಗುವ ಯಾವುದೇ ಪೂರಕಾಂಶಗಳು ದೊರೆತಿರುವುದಿಲ್ಲ.

18. ಈ ಪ್ರಕರಣದಲ್ಲಿ ಚಾಸಾ-13 ಮತ್ತು 14 ರವರು ಮೃತ ದೊಡ್ಡಮ್ಮ ಮತ್ತು ತಾಯಮ್ಮ ಇವರು ಇವರ ಮರಣೋತ್ತರ ಪರೀಕ್ಷೆ ಮಾಡಿದ ವೈದ್ಯಾಧಿಕಾರಿಗಳಾಗಿದ್ದು, ಸದರಿ ತಾಯಮ್ಮ ಇವರ ಶವ ಪರೀಕ್ಷಾ ವರದಿಯನ್ನು ನಿಪಿ-18 ಎಂದು ಗುರುತಿಸಿರುತ್ತಾರೆ ಮತ್ತು ದೊಡ್ಡಮ್ಮ ಇವರ ಶವ ಪರೀಕ್ಷಾ ವರದಿಯನ್ನು ನಿಪಿ-20 ಎಂದು ಆರೋಪಿ ಪರ ವಕೀಲರು ಒಪ್ಪಿಗೆಯ ಮೇರೆಗೆ ಗುರುತಿಸಿದ್ದು, ಚಾಸಾ-13 ಮತ್ತು 14 ರ ಸಾಕ್ಷಿಗಳನ್ನು ಕೈಬಿಡಲಾಗಿರುತ್ತದೆ.

19. ಚಾಸಾ-15 ಇವರು ಈ ಪ್ರಕರಣದಲ್ಲಿ ಅಪಘಾತಕ್ಕೆ ಕಾರಣದವಾದ ಟಂಟಂ ವಾಹನ ನಂ ಕೆಎ-32-ಸಿ-3654 ಮತ್ತು ಅಪಘಾತಪಡಿಸಿದ ಟ್ರ್ಯಾಕ್ಟರ ನಂಕೆಎ-32-ಜೆಎ-7972 ಮತ್ತು ಟ್ರಾಲಿ ನಂ.ಕೆಎ-32-ಜೆಎ-7639 ಇವುಗಳ ಬಗ್ಗೆ ವಾಹನ ತಪಾಸಣೆ ಮಾಡಿ ವರದಿ ನೀಡಿದ್ದು ಸದರಿವರದಿಯನ್ನು ಆರೋಪಿ ಪರ ವಕೀಲರ ಒಪ್ಪಿ ಗೆಯ ಮೇರೆಗೆ ನಿಪಿ-23ಎಂದು ಗುರುತಿಸಲಾಗಿರುತ್ತದೆ. ಸದರಿ ವರದಿಯ ಪ್ರಕಾರ ಎರಡು ವಾಹನಗಳಿಗೆ ಹಾನಿಯಾಗಿರುವುದಿಲ್ಲ ಎಂದು ತಮ್ಮ ವರದಿಯಲ್ಲಿ ನೀಡಿರುತ್ತಾರೆ. ಚಾಸಾ-16 ರಿಂದ 18 ರವರ ಸಾಕ್ಷಿಯನ್ನು ಸಹಾಯಕ ಸರ್ಕಾರಿ ಅಭೀಯೋಜಕರ ಕೋರಿಕೆಯ ಮೇರೆಗೆ ಮತ್ತು ಆರೋಪಿ ಪರ ವಕೀಲರ ಒಪ್ಪಿಗೆಯ ಮೇರೆಗೆ ಸದರಿ ಸಾಕ್ಷಿಯನ್ನು ಕೈ ಬಿಡಲಾಗಿರುತ್ತದೆ.

20. ಈ ಪ್ರಕರಣದಲ್ಲಿ ತನಿಖಾಧಿಕಾರಿಯಾದ ಚಾಸಾ-19/ಪ್ರಾಸಾ-9 ಮೇಲನಗೌಡ, ನಿವೃತ್ತ ಎ ಎಸ್‌ಐ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 24-06-2016 ರಂದು ಚಾಸಾ-21 ಅವರ ಮೌಖೀಕ ಆದೇಶದ ಮೆರೆಗೆ ತಾನು ಚಾಸಾ-18 ಅವರ ಜೊತೆ ಕಲಬುರ್ಗಿ ಸರಕಾರಿ ಆಸ್ಪತ್ರೆಗೆ ಹೋಗಿ ಚಾಸಾ-11 ಅವರ ಹೇಳಿಕೆ ಪಡೆದಿರುತ್ತೇನೆ, ನಂತರ ಚಾಸಾ-2 ರಿಂದ 4 ಅವರ ಸಮಕ್ಷಮ ಮೃತ ತಾಯಮ್ಮ ಗಂಡ ಮಹಾಂತಪ್ಪ ಅವರ ಶವ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಂತರ ಚಾಸಾ-18 ಅವರಿಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಿರುತ್ತೇನೆ, ಆ ಬಗ್ಗೆ ಚಾಸಾ-21 ಅವರಿಗೆ ವರದಿ ನೀಡಿರುತ್ತೇನೆ, ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-21 ಅವರಿಗೆ ವಹಿಸಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಆರೋಪಿ ರ ವಕೀಲರ ಪಾಟೀ ಸವಾಲಿನಲ್ಲಿ ಆರೋಪಿಗೆ ಸಹಾಯವಾಗುವ ಯಾವುದೇ ಪೂರಕಾಂಶಗಳು ದೊರೆತಿರುವುದಿಲ್ಲ.

21. ಈ ಪ್ರಕರಣದಲ್ಲಿ ತನಿಖಾಧಿಕಾರಿಯಾದ ಚಾಸಾ-20/ಪ್ರಾಸಾ-12 ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 23-06-2016 ರಂದು ರಾತ್ರಿ 10-00 ರ ಸಮಯದಲ್ಲಿ ತಾನು ಕಚೇರಿಯಲ್ಲಿದ್ದಾಗ ಚಾಸಾ-1 ಅವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ನಂತರ ಯಡ್ರಾಮಿ ಸರಕಾರಿ ಆಸ್ಪತ್ರೆಗೆ ಭೆಟಿ ನೀಡಿ ಚಾಸಾ-2 ಮತ್ತು ಚಾನಾ-3 ಅವರ ಸಮಕ್ಷಮ ಮೃತ ದೊಡ್ಡಮಳ ಶವ ಪಂಚನಮೆಯನ್ನು ಜರುಗಿಸಿರುತ್ತೇನೆ, ದಿನಾಂಕ 24-06-2016 ರಂದು ಪ್ರಕರಣದ ಕಡತವನ್ನು ಚಾಸಾ-21 ಅವರಿಗೆ ವಹಿಸಿರುತ್ತೇನೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಆರೋಪಿ ಪರ ವಕೀಲರ

ಪಾಟೀ ಸವಾಲಿನಲ್ಲಿ ಆರೋಪಿಗೆ ಸಹಾಯವಾಗುವ ಯಾವುದೇ ಅಂಶಗಳು ದೊರೆತಿರುವುದಿಲ್ಲ.

22. ಈ ಪ್ರಕರಣದಲ್ಲಿ ತನಿಖಾಧಿಕಾರಿಯಾರಿಯಾದ ಚಾಸಾ-21/ಪ್ರಾಸಾ-11 ಜಾಕೀರ ಇನಾಮದಾರ, ಡಿವೈಎಸ್‌ಪಿ ಲೋಕಾಯುಕ್ತ, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 24-06-2016 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-20 ಅವರಿಂದ ಪಡೆದುಕೊಂಡು ಅದೇ ದಿನ ಗುನ್ನಾ ಜಾಗೆಗೆ ಭೆಟ್ಟಿ ನೀಡಿ ಚಾಸಾ-2 ಮತ್ತು 3 ಅವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ, ಅದೇ ದಿನ ಯಡ್ರಾಮಿ ಠಾಣೆಗೆ ಭೆಟ್ಟಿ ನೀಡಿ ಚಾಸಾ-16 ಅವರು 2.WXCF40606099778, ಹಾಜರಪಡಿಸಿದ ಟ್ರ್ಯಾಕ್ಟರ ಚೆಸ್ಸಿ ನ್ನು trolly No.SVJA11006 ಜಪ್ತಿಪಡಿಸಿಕೊಂಡಿರುತ್ತೇನೆ, ಅದೇ ಯಡ್ರಾಮಿ ಆಸ್ಪತ್ರೆಗೆ ಭೆಟ್ಟಿ ನೀಡಿ ಚಾನಾ-1 ಅವರು ತೋರಿಸಿದ ಟಂಟಂ ನಂ.ಕೆಎ-32/ಸಿ-3654 ನ್ನು ಚಾಸಾ-5 ಮತ್ತು ಚಾಸಾ-6 ಅವರ ಸಮಕ್ಷಮ ಜಪ್ತಿ ಪಡಿಸಿಕೊಂಡಿರುತ್ತೇನೆ, ಸದರಿ ಅಪಘಾತವು ಟಂಟಂ ಹಾಗೂ ಟ್ರ್ಯಾಕ್ಟರ ಚಾಲಕರ ತಪ್ಪಿನಿಂದಾಗಿರುತ್ತದೆ ಎಂದು ಚಾಸಾ-1 ಅವರು ಪುರವಣಿ ಹೇಳಿಕೆ ಪಡೆದಿರುತ್ತೇನೆ, ಅದೇ ದಿನ ಚಾಸಾ-7 ರಿಂದ ಚಾಸಾ-10 ಅವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಚಾಸಾ-19 ಅವರಿಂದ ಮೃತ ತಾಯಮ್ಮ ಶವ ಪಂಚನಾಮೆ ವರದಿ ಪಡೆದಿರುತ್ತೇನೆ, ಅದೇ ಚಾಸಾ-20 ಅವರನ್ನು ಆರೋಪಿತರ ಪತ್ತೆ ಮಾಡಿ ದಸ್ತಗಿರಿ ಮಾಡುವಂತೆ ಆದೇಶ ಮಾಡಿರುತ್ತೇನೆ, ದಿನಾಂಕ 13-07-2016 ರಂದು ಅಪಘಾತಕ್ಕಿಡಾದ ವಾನಗಳ IMV ವರದಿಗಾಗಿ ಚಾಸಾ-15 ಅವರಿಗೆ ಪತ್ರ ಬರೆದಿರುತ್ತೇನೆ, ಚಾಸಾ-13 ಅವರಿಂದ ಮೃತ ದೊಡ್ಡಮ್ಮರವರ ಪಿಎಂ ಇ ವರದಿಯನ್ನು ಪಡೆದಿರುತ್ತೇನೆ. ದಿನಾಂಕ 16-07-2016 ರಂದು ಟ್ರ್ಯಾಕ್ಟರ ಚಾಲಕ ಆರೋಪಿಯನ್ನು ಠಾಣೆಗೆ

ಹಾಜರಾಗಿದ್ದರಿಂದ, ಚಾಸಾ-1, 7 ರಿಂದ 9 ಆರೋಪಿತನ ಗುರುತಿಸುವಿಕೆ ಬಗ್ಗೆ ಪುನರ ಹೇಳಿಕೆ ಪಡೆದಿರುತ್ತೇನೆ, ಅದೇ ದಿನ ಟ್ರ್ಯಾಕ್ಟರ ಚಾಲಕನನ್ನು ಬಿಡುಗಡೆ ಮಾಡಿರುತ್ತೇನೆ, ಅದೇ ದಿನ ಟ್ರ್ಯಾಕ್ಟರ ಮತ್ತು ಟ್ರಾಲಿಯನ್ನು ಸೂಕ್ತ ಬಾಂಡ ಪಡೆದು ಚಾಸಾ-12 ಅವರಿಗೆ ಬಿಡುಗಡೆ ಮಾಡಿರುತ್ತೇನೆ, ಅದೇ ದಿನ ಟ್ರ್ಯಾಕ್ಟರ ಚಾಲಕನನ್ನು ಬಿಡುಗಡೆ ಮಾಡಿರುತ್ತೇನೆ, ದಿನಾಂಕ 22-07-2016 ರಂದು ಇನ್ನೊಬ್ಬ ಆರೋಪಿ ಮಲಕಪ್ಪ ತಳವಾರ ಇತನು ಠಾಣೆಗೆ ಹಾಜರಾಗಿದ್ದರಿಂದ ಆತನನ್ನು ದಸ್ತಗಿರಿ ನಿಯಮ ಪಾಲಿಸಿ ಬಿಡುಗಡೆ ಮಾಡಿರುತ್ತೇನೆ, ಅದೇ ದಿನ ಟಂಟಂನ್ನು ಸೂಕ್ತ ಬಾಂಡ ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ, ಅದೇ ದಿನ ಎರಡು ವಾಹನಗಳ ಐ ಎಂ ವಿ ವರದಿಯನ್ನು ಚಾಸಾ-15 ಅವರಿಂದ ಪಡೆದುಕೊಂಡಿರುತ್ತೇನೆ, ದಿನಾಂಕ 04-08-2016 ರಂದು ಪ್ರಕರಣದ ಕಡತವನ್ನು ಚಾಸಾ-22 ಅವರಿಗೆ ವಹಿಸಿರುತ್ತೇನೆ, ಈ ಪ್ರಕರಣದ ಎಲ್ಲಾ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಪ್ರಕರಣದಲ್ಲಿ ಹಾಜರ ಪಡಿಸಿರುತ್ತೇನೆ. ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಆರೋಪಿಗೆ ಸಹಾಯವಾಗುವಂ ಯಾವುದೇ ಪೂರಕಾರಂಶಗಳು ದೊರೆತಿರುವುದಿಲ್ಲ.

23. ಈ ಪ್ರಕರಣದಲ್ಲಿ ತನಿಖಾಧಿಕಾರಿಯಾದ ಚಾಸಾ-22/ಪ್ರಾಸಾ-10 ಹುಸೇನ, ನಿವೃತ್ತ ಪಿ ಐ, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04-08-2016 ರಂದು ಚಾಸಾ-21 ಅವರಿಂದ ಕಡತವನ್ನು ಪಡೆದಿರುತ್ತೇನೆ, ದಿನಾಂಕ 26-08-2016 ರಂದು ಚಾಸಾ-13 ಅವರಿಂದ ತಾಯಮ್ಮ ಅವರ ಮರಣೋತ್ತರ ವರದಿಯನ್ನು ಪಡೆದಿರುತ್ತೇನೆ, ಸದರಿ ಪ್ರಕರಣದಲ್ಲಿ ಫಿರ್ಯಾದಿ, ಪ್ರಥಮ ವರ್ತಮಾನ ವರದಿ, ಚಾಸಾ-1 ಅವರ ಹೇಳಿಕೆ ಮತ್ತು ಎರಡು ಪುರವಣಿ ಹೇಳಿಕೆ, ಮೃತ ತಾಯಮ್ಮ ಮತ್ತು ದೊಡ್ಡಮ್ಮರವರ ಶವ ಪಂಚನಾಮೆಗಳು, ಗುನ್ನಾ

ಜಾಗದ ಪಂಚನಾಮೆ, ಎರಡು ಜಪ್ತಿ ಪಂಚನಾಮೆಗಳು, ಚಾಸಾ-7 ರಿಂದ ಚಾಸಾ-12 ಅವರ ಹೇಳಿಕೆಗಳನ್ನು ಚಾಸಾ-7 ರಿಂದ ಚಾಸಾ-9 ಅವರ ಪುನರ ಹೇಳಿಕೆಗಳು, ಚಾಸಾ-19 ಅವರ ವರದಿ, ಚಾಸಾ-16 ಅವರ ಹೇಳಿಕೆ, ದೊಡ್ಡಮರವರ ಪಿ ಎಂ ಇ ಮತ್ತು ಐ ಎಂ ವಿ ವರದಿಗಳು ಹಾಗೂ ಅಪಘಾತಕ್ಕಿಡಾದ ವಾಹನಗಳ ಫೋಟೋಗಳನ್ನು ಪರಿಶೀಲಿಸಿ ಅದೇ ದಿನ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತೇನೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಆರೋಪಿ ಪರ ಪಾಟೀ ಸವಾಲಿನಲ್ಲಿ ಆರೋಪಿಗೆ ಸಹಾಯವಾಗುವ ಯಾವುದೇ ಪೂರಕಾಂಶಗಳು ದೊರೆತಿರುವುದಿಲ್ಲ.

24. ಈ ಪ್ರಕರಣದಲ್ಲಿ ಆರೋಪಿ ಪರ ವಕೀಲರ ವಾದವೆನೆಂದರೆ, ಈ ಪ್ರಕರಣದಲ್ಲಿ ಒಂದೇ ಗುನ್ನೆಯಲ್ಲಿ ಎರಡು ದೋಷಾರೋಪಣೆ ಪಟ್ಟಿಗಳನ್ನು ಸಲ್ಲಿಸಿದ್ದು, ಈ ಪ್ರಕರಣದಲ್ಲಿ ಆರೋಪಿತನ ತಪ್ಪಿ ನಿಂದ ಅಪಘಾತವಾಗಿರುವುದಿಲ್ಲ, ಮುಂದುವರೆದು ಟ್ರ್ಯಾಕ್ಟರ ಚಾಲಕನ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದು ತಮ್ಮವಾದದಲ್ಲಿ ಹೇಳುತ್ತಾರೆ. ಈ ಪ್ರಕರಣದಲ್ಲಿ ಮೃತ ತಾಯಮ್ಮ ಮತ್ತು ದೊಡ್ಡಮ್ಮ ಅಪಘಾತದಲ್ಲಿ ಮೃತರಾಗಿದ್ದ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಆದರೆ ಆರೋಪಿ ಪರ ವಕೀಲರ ವಾದವೆನೆಂದರೆ ಸದರಿ ಅಪಘಾತವು ಟ್ರ್ಯಾಕ್ಟರ ತಪ್ಪಿನಿಂದಲೇ ಆಗಿರುತ್ತದೆ ಎಂದು ಹೇಳುತ್ತಾರೆ. ಕ್ರಿಮಿನಲ್ ಕಾನೂನಿನ ತತ್ವದ ಪ್ರಕಾರ ಆರೋಪಿತನ ವಿರುದ್ದಮಾಡಲಾದ ಆರೋಪವನ್ನು ಸಂಶಾಯತೀತವಾಗಿ ರುಜುವಾತು ಪಡಿಸುವ ಹೊಣೆಗಾರಿಕೆ ಅಭೀಯೋಜನೆಯ ಮೇಲೆ ಇರುತ್ತದೆ. ಒಂದು ವೇಳೆ ಅಭೀಯೋಜನೆಯು ಆರೋಪಿತನ ವಿರುದ್ದ ಮಾಡಲಾದ ಆರೋಪವನ್ನು

ಸಂಶಾಯತೀತವಾಗಿ ರುಜುವಾತು ಪಡಿಸದಿದ್ದಲ್ಲಿ ಅದರ ಲಾಭವು ಆರೋಪಿಗೆ ನೀಡಬೇಕೆಂದು ಹೇಳುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಪ್ರಾಸಾ-1 ರಿಂದ 12 ರ ಸಾಕ್ಷಿಗಳನ್ನು ಕುಲಂಕುಷವಾಗಿ ಪರಿಶೀಲನೆ ಮಾಡಿ ನೋಡಿದಾಗ ಪ್ರಾಸಾ-1 ರವರು ಟ್ರ್ಯಾಕ್ಟರ ಚಾಲಕನು ತನ್ನ ಟ್ರ್ಯಾಕ್ಟರನ್ನು ಅತೀ ವೇಗವಾಗಿ ಬಂದು ಟಂಟಂ ಗೆ ಡಿಕ್ಕಿಪಡಿಸಿರುತ್ತಾನೆಂದು ತಮ್ಮ ಸಾಕ್ಷಿಯಲ್ಲಿ ಹೇಳುತ್ತಾರೆ. ಮುಂದುವರೆದು ತಮ್ಮ ಪಾಟೀ ಸವಾಲಿನಲ್ಲಿ ಅಪಘಾತವಾದ ಸ್ಥಳದ ರಸ್ತೆಯು ಕಿರಿದಾಗಿದೆ ಎಂದು ಒಪ್ಪಿಕೊಳ್ಳುತ್ತಾರೆ. ಚಾಸಾ-7 ರವರು ತಮ್ಮ ಪಾಟೀ ಸವಾಲಿನಲ್ಲಿ ಟ್ರ್ಯಾಕ್ಟರ ಚಾಲಕನ್ನು ಅತೀ ವೇಗವಾಗಿ ಬಂದು ಟಂಟಂ ಗೆ ಡಿಕ್ಕಿಪಡಿಸಿರುತ್ತಾನೆಂದು ತಮ್ಮ ಸಾಕ್ಷಿಯಲ್ಲಿ ಹೇಳಿರುತ್ತಾರೆ. ಚಾಸಾ-10 ರವರು ಈ ಪ್ರಕರಣದಲ್ಲಿ ಕೇಳಿ ತಿಳಿದುಕೊಂಡ ಸಾಕ್ಷಿದಾರರಾಗಿರುತ್ತಾರೆ. ಈ ಪ್ರಕರಣದಲ್ಲಿ ಎಲ್ಲಾ ಸಾಕ್ಷಿಗಳನ್ನು ಕುಲಂಕುಷವಾಗಿ ಪರಿಶೀಲನೆ ಮಾಡಿ ನೋಡಲಾಗಿ ಟಂಟಂ ವಾಹನದ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ತನಿಖಾಧಿಕಾರಿಗಳು ಪ್ರಸ್ತುತ ದೋಷಾರೋಪಣೆ ಪಟ್ಟಿ ಸಲ್ಲಿರುತ್ತಾರೆ. ಸದರಿ ಗುನ್ನೆ ನಂಬರನಲ್ಲಿ ಕ್ರಿಮಿನಲ್ ಪ್ರಕರಣ ಸಂಖ್ಯೆ 524/2016 ರಲ್ಲಿ ಟ್ರ್ಯಾಕ್ಟರ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆಂದು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ.  ಈ ಪ್ರಕರಣದ ವಸ್ತು ಸ್ಥಿತಿಯನ್ನು ಗಮನಿಸಿದಾಗ ಟ್ರ್ಯಾಕ್ಟರನ ಟ್ರಾಲಿ ಭಾಗವು ಟಂಟಂ ಗೆ ಡಿಕ್ಕಿಪಡಿಸಿರುವದು ಕಂಡು ಬರುತ್ತದೆ.  ಆದರೆ ಐಎಂವಿ ವರದಿಯ ಪ್ರಕಾರ ಟ್ರ್ಯಾಕ್ಟರ ಮತ್ತು ಟಂಟಂ ನ ಯಾವ ಭಾಗವು ಹಾನಿಯಾರುವುದಿಲ್ಲವೆಂದು ವರದಿಯಲ್ಲಿ ನಮೂದಾಗಿರುತ್ತದೆ.  ಈ ಪ್ರಕರಣದಲ್ಲಿ ಮುಖ್ಯವಾಗಿ ಆರೋಪಿತನ ಅತೀ ವೇಗ ಮತ್ತು ನಿರ್ಲಕ್ಷತನದಿಂದಲೇ ಅಪಘಾತವಾಗಿರುತ್ತದೆಂದು ತೋರಿಸಲು ಯಾವುದೇ ದೃಢವಾದ ಸಾಕ್ಷಿಗಳು ಇರುವುದಿಲ್ಲ.  ಈ ಪ್ರಕರಣದಲ್ಲಿ ಒಂದೇ ಗುನ್ನೆ ನಂಬರದಲ್ಲಿ ಎರಡುದೋಷಾರೋಪಣೆ ಪಟ್ಟಿಗಳನ್ನು ಸಲ್ಲಿಸಿರುವುದರಿಂದ, ಈ

ಪ್ರಕರಣದಲ್ಲಿ ಹಾಜರುಪಡಿಸಿದ ಚಾಸಾ-1, ಚಾಸಾ-7 ಮತ್ತು ಚಾಸಾ-10 ರ ಸಾಕ್ಷಿಗಳು ಒಂದಕ್ಕೊಂದು ಪೂರಕವಾಗಿರುವುದಿಲ್ಲ. ಆದ್ದರಿಂದ ಈ ನ್ಯಾಯಾಲಯವು ಆರೋಪಿತನ ಅತೀ ವೇಗ ಮತ್ತು ಅಲಕ್ಷತನದಿಂದ ಅಪಘಾತವಾಗಿರುತ್ತದೆಂದು ಅಭೀಯೋಜನೆಯು ಸಂಶಾಯತೀತವಾಗಿ ರುಜುವಾತು ಪಡಿಸಲು ವಿಫಲರಾಗಿರುತತದೆಂದು ಅಭಿಪ್ರಾಯ ಪಡುತ್ತದೆ. ಆದ್ದರಿಂದ ಸಂಶಯದ ಲಾಭ ಆರೋಪಿಗೆ ನೀಡಿ ಅಂಶ ನಂ. 1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

25. **<u>ಅಂಶ ನಂ.4</u>:-** ಅಂಶ ನಂ.1 ರಿಂದ 3 ನೇದ್ದವುಗಳನ್ನು ಸಕರಾತ್ಮಕವಾಗಿ ಉತ್ತರಿಸಿರುವುದರಿಂದ, ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೆನೆ.

**<u>ಆ ದೇ ಶ</u>**

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(2) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿತನನ್ನು ಭಾರತೀಯ ದಂಡ ಸಂಹಿತೆ ಕಲಂ 279, 304(ಎ) ಸಹ ಕಲಂ 187 ಐ ಎಂ ವಿ ಆ್ಯಕ್ಟ ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತನ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಭದ್ರತೆಗಳನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ

ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 17ನೇ ಎಪ್ರೀಲ್-2026 ರಂದು ತೀರ್ಪನ್ನು ಘೋಷಿಸಲಾಯಿತು)

**(ಶ್ರೀ ಕಾಶಿನಾಥ ವಿ. ಉಪ್ಪಾರ್)**
ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ.

## ಅನುಬಂಧ

## ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ

ಪಿ.ಡಬ್ಲ್ಯೂ-1 : ಪಾರ್ವತಿ ಗಂಡ ಬಸವಂತಪ್ಪ

ಪಿ.ಡಬ್ಲ್ಯೂ-2 : ಪರಶುರಾಮ ತಂದೆ ಭೋಜಪ್ಪ

ಪಿ.ಡಬ್ಲ್ಯೂ-3 : ಅಶೋಕ ತಂದೆ ಭಾಗಪ್ಪ

ಪಿ.ಡಬ್ಲ್ಯೂ-4 : ಸಿದ್ದಮ್ಮ ಗಂಡ ಈರಪ್ಪ

ಪಿ.ಡಬ್ಲ್ಯೂ-5 : ತಯಬಅಲಿ ತಂದೆ ಗುಲಾಬಸಾಬ

ಪಿ.ಡಬ್ಲ್ಯೂ-6 : ನಾನು ತಂದೆ ಗಂಗು ರಾಠೋಡ

ಪಿ.ಡಬ್ಲ್ಯೂ-7 : ಉದಯಕುಮಾರ ತಂದೆ ಬಸಯ್ಯಾ

ಪಿ.ಡಬ್ಲ್ಯೂ-8 : ಅಮರೇಶ ತಂದೆ ಲಕ್ಷ್ಮಣ KSRTC driver-cum-conduct

ಪಿ.ಡಬ್ಲ್ಯೂ-9 : ಮಲನಗೌಡ ತಂದೆ ಬಸನಗೌಡ ನಿವೃತ್ತ ಎ ಎಸ್ ಐ

ಪಿ.ಡಬ್ಲ್ಯೂ-10 : ಹುಸೇನ ತಂದೆ ಮೋದಿನಸಾಬ ನಿವೃತ್ತ ಪಿ ಐ

ಪಿ.ಡಬ್ಲ್ಯೂ-11 : ಜಾಕೀರ ಇನಾಮದಾರ ಡಿ ವೈ ಎಸ್ ಪಿ

ಪಿ.ಡಬ್ಲ್ಯೂ-12 : ಆನಂದರಾವ ತಂದೆ ಶಿವರಾಯ ಪಿ ಐ

## ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ

ನಿ.ಪಿ.1 : ದೂರು

ನಿ.ಪಿ.2 ರಿಂದ 9 : ವಾಹನದ ಫೋಟೋಗಳು

| | | |
|---|---|---|
| ನಿ.ಪಿ.10 | : | ಶವ ಪಂಚನಾಮೆ |
| ನಿ.ಪಿ.10(ಅ) | : | ಅಸಾ-2 ಅವರ ಸಹಿ |
| ನಿ.ಪಿ.10(ಬಿ) | : | ಅಸಾ-3 ಅವರ ಸಹಿ |
| ನಿ.ಪಿ.11 | : | ಗುನ್ಹಾ ಸ್ಥಳ ಪಂಚನಾಮೆ |
| ನಿ.ಪಿ.11(ಅ) | : | ಅಸಾ-2 ಅವರ ಸಹಿ |
| ನಿ.ಪಿ.11(ಬಿ) | : | ಅಸಾ-3 ಅವರ ಸಹಿ |
| ನಿ.ಪಿ.11(ಸಿ) | : | ಅಸಾ-11 ಅವರ ಸಹಿ |
| ನಿ.ಪಿ.12 | : | ಜಪ್ತಿ ಪಂಚನಾಮೆ |
| ನಿ.ಪಿ.12(ಅ) | : | ಅಸಾ-5 ಅವರ ಸಹಿ |
| ನಿ.ಪಿ.12(ಸಿ) | : | ಅಸಾ-11 ಅವರ ಸಹಿ |
| ನಿ.ಪಿ.12(ಬಿ) | : | ಅಸಾ-7 ಅವರ ಸಹಿ |
| ನಿ.ಪಿ.13 | : | ಜಪ್ತಿ ಪಂಚನಾಮೆ |
| ನಿ.ಪಿ.13(ಅ) | : | ಅಸಾ-5 ಅವರ ಸಹಿ |
| ನಿ.ಪಿ.13(ಬಿ) | : | ಅಸಾ-7 ಅವರ ಸಹಿ |
| ನಿ.ಪಿ.13(ಸಿ) | : | ಅಸಾ-11 ಅವರ ಸಹಿ |
| ನಿ.ಪಿ.4 ಮತ್ತು 15 | : | ಅಸಾ-6 ಅವರ ಹೇಳಿಕೆ ಮತ್ತು ಪುನರಹೇಳಿಕೆ |
| ನಿ.ಪಿ.16 | : | ಚಾಸಾ-11 ಅವರ ಹೇಳಿಕೆ |
| ನಿ.ಪಿ.16(ಅ) | : | ಚಾಸಾ-11 ಅವರ ಸಹಿ |
| ನಿ.ಪಿ.17 | : | ಶವ ಪಂಚನಾಮೆ |
| ನಿ.ಪಿ.17 | : | ಚಾಸಾ-9 ಅವರ ಹೇಳಿಕೆ |
| ನಿ.ಪಿ.18 | : | ಶವ ಪರೀಕ್ಷಾ ವರದಿ |
| ನಿ.ಪಿ.18(ಅ) | : | ಸಹಿ |

| | | |
|---|---|---|
| ನಿ.ಪಿ.19 | : | ಚಾಸಾ-9 ಅವರ ವರದಿ |
| ನಿ.ಪಿ.19(ಅ) | : | ಚಾಸಾ-9 ಅವರ ಸಹಿ |
| ನಿ.ಪಿ.20 | : | ದೊಡ್ಡಮಳ ಶವ ಪರೀಕ್ಷಾ ವರದಿ |
| ನಿ.ಪಿ.20(ಅ) | : | ಪ್ರಾಸಾ-11 ಅವರ ಸಹಿ |
| ನಿ.ಪಿ.21 | : | ಇಂಡೆಮನಿಟಿ ಬಾಂಡ |
| ನಿ.ಪಿ.21(ಅ) | : | ಅಸಾ-11 ಅವರ ಸಹಿ |
| ನಿ.ಪಿ.22 | : | ಇಂಡೆಮನಿಟಿ ಬಾಂಡ |
| ನಿ.ಪಿ.22(ಅ) | : | ಅಸಾ-11 ಅವರ ಸಹಿ |
| ನಿ.ಪಿ.23 | : | ಮೋಟಾರ ವಾಹನ ಪರೀಕ್ಷಾ ವರದಿ |
| ನಿ.ಪಿ.23(ಎ) | : | ಅಸಾ-11 ಅವರ ಸಹಿ |
| ನಿ.ಪಿ.24 | : | ಪ್ರಥಮ ವರ್ತಮಾನ ವರದಿ |

**ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ**

- ಇಲ್ಲ -

**ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

- ಇಲ್ಲ -

**ಅಭಿಯೋಜನೆ ಪರವಾಗಿ ಗುರ್ತಿಸಲಾದ ಮುದ್ದೆಮಾಲುಗಳ ವಿವರ**

- ಇಲ್ಲ -

ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

Dictated on : 17-04-2026
Transcribed on : 17-04-2026

KAKB620017282016

checked on : 17-04-2026
Signed on : 17-04-2026

KASHINATH VASANT UPPAR

Digitally signed by KASHINATH VASANT UPPAR
Date: 2026.04.17 11:18:44 +0530

(**Kashinath V. Uppar**)
**CIVIL JUDGE JMFC, Jewargi.**

Visit **ecourts.gov.in** for updates or download mobile app "**eCourts Services**" from Android or iOS